**All India Radio: Bangalore**
**National Bulletin In Kannada**
**08.02.2026 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**08.02.2026 7.35 am**

**<>><><*><><<>**

ಮುಖ್ಯಾಂಶಗಳು

**೧. ಮಲೇಷ್ಯಾದಲ್ಲಿನ ಭಾರತೀಯ ವಲಸಿಗರು ಉಭಯ ದೇಶಗಳನ್ನು ಸಂಪರ್ಕಿಸುವ "ಜೀವಂತ ಸೇತುವೆ" ಎಂದು ಬಣ್ಣಿಸಿದ ಪ್ರಧಾನಿ ನರೇಂದ್ರ ಮೋದಿ**

**೨. ಬೆಂಗಳೂರು ಐಟಿ, ಸ್ಟಾರ್ಟ್‌ಅಪ್, ಎಲೆಕ್ಟ್ರಾನಿಕ್ಸ್ ಮತ್ತು ನಾವೀನ್ಯತೆಯ ಪ್ರಮುಖ ಕೇಂದ್ರವಾಗಿದೆ- ಸಚಿವ ಅಶ್ವಿನಿ ವೈಷ್ಣವ್**

**೩. ಕರ್ನಾಟಕ ಸರ್ಕಾರದ ಕೋರಿಕೆ ಮೇರೆಗೆ ಕೆಎಫ್‌ಡಿ ವಿರುದ್ಧ ಸುಧಾರಿತ ಲಸಿಕೆ ಅಭಿವೃದ್ಧಿಪಡಿಸುವತ್ತ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ**

**೪. ಪುರುಷರ ಟಿ-೨೦ ವಿಶ್ವಕಪ್ ಕ್ರಿಕೆಟ್; ಚೊಚ್ಚಲ ಪಂದ್ಯದಲ್ಲಿ ಅಮೆರಿಕ ವಿರುದ್ಧ ೨೯ ರನ್‌ಗಳಿಂದ ಭಾರತಕ್ಕೆ ಜಯ**

**<>><><*><><<>**

ಭಾರತೀಯ ವಲಸಿಗರನ್ನು ಭಾರತ ಮತ್ತು ಮಲೇಷ್ಯಾವನ್ನು ಸಂಪರ್ಕಿಸುವ "ಜೀವಂತ ಸೇತುವೆ" ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ. ಕೌಲಾಲಂಪುರದಲ್ಲಿ ನಡೆದ ಸೆಲಾಮತ್ ದತಾಂಗ್ ಮೋದಿ ಜಿ ಎಂಬ ಸಮುದಾಯ ಕಾರ್ಯಕ್ರಮದಲ್ಲಿ ಭಾರತೀಯ ವಲಸಿಗರನ್ನು ಉದ್ದೇಶಿಸಿ ನಿನ್ನೆ ಅವರು ಮಾತನಾಡಿದರು. ಭಾರತ-ಮಲೇಷ್ಯಾ ಸಂಬಂಧದ ಮಾರ್ಗದರ್ಶಿ ಪದವೆಂದರೆ ಇಂಪ್ಯಾಕ್ಟ್ ಎಂಬುದಾಗಿದೆ. ಇದು ಸಾಮೂಹಿಕ ಪರಿವರ್ತನೆಗಾಗಿ ಭಾರತ-ಮಲೇಷ್ಯಾ ಪಾಲುದಾರಿಕೆಯನ್ನು ಸೂಚಿಸುತ್ತದೆ ಎಂದು ಅವರು ಹೇಳಿದ್ದಾರೆ. ಪ್ರಧಾನಿ ಮೋದಿ ಅವರು ಎರಡು ದಿನಗಳ ಅಧಿಕೃತ ಮಲೇಷ್ಯಾ ಭೇಟಿಯಲ್ಲಿದ್ದು, ಜನರಿಂದ ಜನರಿಗೆ ಸಂಬಂಧಗಳು, ವೈಯಕ್ತಿಕ ರಾಜತಾಂತ್ರಿಕತೆ ಮತ್ತು ಭವಿಷ್ಯದ ದ್ವಿಪಕ್ಷೀಯ ಪಾಲುದಾರಿಕೆಗೆ ಬಲವರ್ಧನೆಗೆ ಒತ್ತು ನೀಡಿದರು. ೨೦೨೪ ರಲ್ಲಿ ಉಭಯ ದೇಶಗಳು ತಮ್ಮ ಸಂಬಂಧವನ್ನು ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಗೆ ಒಳಪಡಿಸಿದ ನಂತರ ಇದು ಅವರ ಮೊದಲ ಮಲೇಷ್ಯಾ ಭೇಟಿಯಾಗಿದೆ.

**<>><><*><><<>**

೨೦೨೬ರ ಕೇಂದ್ರ ಬಜೆಟ್‌ನಲ್ಲಿ ಎಲೆಕ್ಟ್ರಾನಿಕ್ಸ್ ಉತ್ಪಾದನೆ ಮತ್ತು ಐ-ಟಿ ವಲಯಕ್ಕೆ ಬಹುದೊಡ್ಡ ಬೆಂಬಲ ನೀಡಲಾಗಿದೆ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಹಾಗೂ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ನಿನ್ನೆ ಕೇಂದ್ರ ಬಜೆಟ್ ಕುರಿತಂತೆ ಮಾತನಾಡಿದ ಅವರು, ಈ ಬಾರಿಯ ಬಜೆಟ್ ನಲ್ಲಿ ಹಲವು ಸುಧಾರಣೆಗಳನ್ನು

ಘೋಷಿಸಲಾಗಿದ್ದು, ಉತ್ಪಾದನಾ ಕ್ಷೇತ್ರಕ್ಕೆ ಒತ್ತು ನೀಡಲಾಗಿದೆ. ಬೆಂಗಳೂರು ಐಟಿ, ಸ್ಟಾರ್ಟ್‌ಅಪ್, ಎಲೆಕ್ಟ್ರಾನಿಕ್ಸ್ ಮತ್ತು ನಾವೀನ್ಯತೆಯ ಪ್ರಮುಖ ಕೇಂದ್ರವಾಗಿದ್ದು, ಈ ಮೂಲಕ ಕರ್ನಾಟಕಕ್ಕೆ ಈ ಬಜೆಟ್‌ನಿಂದ ಬಹಳ ಪ್ರಯೋಜನವಾಗಲಿದೆ ಎಂದು ತಿಳಿಸಿದರು. ಐಟಿ ವಲಯಕ್ಕೆ ಸ್ಥಿರ, ಸರಳ ಮತ್ತು ಬೆಳವಣಿಗೆಗೆ ಅನುಕೂಲಕರ ತೆರಿಗೆ ವ್ಯವಸ್ಥೆಯನ್ನು ರೂಪಿಸಲಾಗಿದೆ. ಇಂತಹ ವಿಶ್ವಾಸಾರ್ಹತೆಯಿಂದ ದೊಡ್ಡಮಟ್ಟದ ಐಟಿ ವಲಯಗಳು ಭಾರತದತ್ತ ಮುಖಮಾಡುತ್ತಿವೆ ಎಂದು ಹೇಳಿದರು.

**ಧ್ವನಿ: ಅಶ್ವಿನಿ ವೈಷ್ಣವ್, ಕೇಂದ್ರ ಸಚಿವ ( ೪೫ ಸೆಕೆಂಡ್ಸ್)**

ಬಹುಮುಖ್ಯವಾಗಿ ಬಜೆಟ್‌ನಲ್ಲಿ ಕಟ್ಟಡ ನಿರ್ಮಾಣ ಘಟಕ, ರಕ್ಷಣಾ ಉತ್ತನ್ನಗಳ ಅಭಿವೃದ್ಧಿ, ಜವಳಿ ಉದ್ಯಮ, ಅಪರೂಪ ಖನಿಜ, ಕ್ರೀಡಾ ಸಾಮಾಗ್ರಿಗಳು, ರಾಸಾಯನಿಕ ಪಾರ್ಕ್ ಸೇರಿದಂತೆ ಹಲವು ಕ್ಷೇತ್ರಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಡಾಟಾ ಸೆಂಟರ್‌ನಲ್ಲಿ ಕೃತಕಬುದ್ಧಿಮತ್ತೆ ಒಳಗೊಂಡ ಸೇವೆ ಒದಗಿಸಲಾಗುವುದು. ಹೊಸ ಸೆಮಿಕಂಡಕ್ಟರ್ ಮಿಷನ್ ೨.೦ ಅನ್ನು ಪ್ರಾರಂಭಿಸಲಾಗಿದ್ದು, ಇದು ಭಾರತದಲ್ಲಿ ಚಿಪ್ ವಿನ್ಯಾಸ, ಉತ್ಪಾದನೆ, ಪೂರ್ಣ ಪೂರೈಕೆ ಬಲಪಡಿಸಲು ಸಹಾಯ ಮಾಡುತ್ತದೆ ಎಂದರು. ಇಂತಹ ಹಲವಾರು ಯೋಜನೆಗಳು ಪ್ರಧಾನಮಂತ್ರಿಯವರ ಆಶಯದಂತೆ ಮತ್ತಷ್ಟು ಜನಜೀವನದ ಬೆಳವಣಿಗೆಗೆ ಸಹಕಾರಿಯಾಗಲಿವೆ ಎಂದು ಅವರು ಹೇಳಿದರು. ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕವು ರೈಲ್ವೆ ಯೋಜನೆಗಳಿಗೆ ೭ ಸಾವಿರದ ೭೪೮ ಕೋಟಿ ರೂಪಾಯಿಗಳನ್ನು ಪಡೆದಿದೆ ಎಂದು ತಿಳಿಸಿದರು.  ಶೀಘ್ರವೇ ಮಂಗಳೂರು - ಬೆಂಗಳೂರು ನಡುವೆ ವಂದೇ ಭಾರತ ರೈಲು ಸಂಚಾರ ಆರಂಭವಾಗಲಿದೆ. ರೈಲು ಮಾರ್ಗದ ಘಾಟ್ ವಿಭಾಗವು ವಿದ್ಯುದ್ದೀಕರಣಗೊಂಂಡಿದ್ದು, ಸುರಕ್ಷತಾ ಪರೀಕ್ಷೆಗಳು ಮತ್ತು ಪ್ರಮಾಣೀಕರಣದ ನಂತರ, ಎರಡು ನಗರಗಳ ನಡುವೆ ಸಂಚರಿಸುವ ರೈಲುಗಳ ವೇಳಾಪಟ್ಟಿಯನ್ನು ಶೀಘ್ರದಲ್ಲೇ ಘೋಷಿಸಲಾಗುವುದು ಎಂದು ಸಚಿವ ಅಶ್ವಿನಿ ವೈಷ್ಣವ್ ಮಾಹಿತಿ ನೀಡಿದರು.

**<><><*><><<>**

ಕ್ಯಾಸನೂರು ಅರಣ್ಯ ರೋಗ- ಕೆಎಫ್‌ಡಿ ವಿರುದ್ಧ ಸುಧಾರಿತ ಲಸಿಕೆಯನ್ನು ಅಭಿವೃದ್ಧಿಪಡಿಸುವತ್ತ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ- ಐಸಿಎಂಆರ್ ಪ್ರಗತಿಯಲ್ಲಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.  ಕರ್ನಾಟಕ, ತಮಿಳುನಾಡು, ಕೇರಳ, ಗೋವಾ ಮತ್ತು ಮಹಾರಾಷ್ಟ್ರದಂತಹ ರಾಜ್ಯಗಳನ್ನು ಒಳಗೊಂಡಂತೆ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಇದು ಒಂದು ಪ್ರಮುಖ ಪ್ರಾದೇಶಿಕ ಸಾಂಕ್ರಾಮಿಕ ರೋಗವಾಗಿದೆ. ಲಸಿಕೆಯನ್ನು ಯಶಸ್ವಿಯಾಗಿ ಅಭಿವೃದ್ಧಿಪಡಿಸಲಾಗಿದೆ ಮತ್ತು ಪ್ರಾಣಿಗಳ ಸವಾಲು ಮತ್ತು ವಿಷತ್ವ ಅಧ್ಯಯನಗಳು ಪೂರ್ಣಗೊಂಡಿವೆ ಎಂದು ಸಚಿವಾಲಯ ಹೇಳಿದೆ. ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆಯ ಅನುಮೋದನೆಯ ನಂತರ ಒಂದನೇ ಹಂತದ ಮಾನವ ಕ್ಲಿನಿಕಲ್ ಪ್ರಯೋಗವನ್ನು ಸಹ ಪ್ರಾರಂಭಿಸಲಾಗಿದೆ ಎಂದು ಅದು ಹೇಳಿದೆ. ಕರ್ನಾಟಕ ಸರ್ಕಾರದ ಕೋರಿಕೆಯ ಮೇರೆಗೆ ಲಸಿಕೆಯ ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ ಮತ್ತು ಐಸಿಎಂಆರ್ ಸಂಪೂರ್ಣವಾಗಿ ಸ್ಥಳೀಯ,

ಎರಡು ಡೋಸ್, ಸಹಾಯಕ ನಿಷ್ಕ್ರಿಯ ಕೆಎಫ್‌ಡಿ ಲಸಿಕೆಯನ್ನು ಅಭಿವೃದ್ಧಿಪಡಿಸುವತ್ತ ಕೆಲಸ ಮಾಡುತ್ತಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ, ಇದನ್ನು ೨೮ ದಿನಗಳ ಮಧ್ಯಂತರದಲ್ಲಿ ನೀಡಲಾಗುತ್ತದೆ.

**<>><><*><><<>**

ಭಾರತ- ಅಮೇರಿಕ ಮಧ್ಯಂತರ ವ್ಯಾಪಾರ ಒಪ್ಪಂದವು ನ್ಯಾಯಯುತ, ಸಮಾನ ಮತ್ತು ಸಮತೋಲಿತವಾಗಿದ್ದು, ರೈತರ ಹಿತಾಸಕ್ತಿಗಳ ಸಂಪೂರ್ಣ ರಕ್ಷಣೆಯನ್ನು ಖಚಿತಪಡಿಸುತ್ತದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ಮೆಕ್ಕೆಜೋಳ, ಗೋಧಿ, ಅಕ್ಕಿ, ಸಕ್ಕರೆ, ಸೋಯಾಬೀನ್ ಮತ್ತು ಕೋಳಿ ಸೇರಿದಂತೆ ಭಾರತದಲ್ಲಿ ಸಮರ್ಪಕವಾಗಿ ಉತ್ಪಾದಿಸುವ ಕೃಷಿ ಮತ್ತು ಡೈರಿ ಉತ್ಪನ್ನಗಳನ್ನು ಸುಂಕ ರಿಯಾಯಿತಿಗಳಿಂದ ಹೊರಗಿಡಲಾಗಿದೆ ಎಂದು ಅವರು ತಿಳಿಸಿದ್ದಾರೆ. ನವದೆಹಲಿಯಲ್ಲಿ ನಡೆದ ಭಾರತ- ಅಮೇರಿಕ ಜಂಟಿ ಹೇಳಿಕೆಯ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಫ್ತುಗಳನ್ನು ಉತ್ತೇಜಿಸುವುದು, ಉದ್ಯೋಗ ಸೃಷ್ಟಿಸುವುದು ಮತ್ತು ವಿಕಸಿತ ಭಾರತ ೨೦೪೭ ರ ಕಡೆಗೆ ಭಾರತದ ಪ್ರಯಾಣವನ್ನು ಮುನ್ನಡೆಸುವುದು ಈ ಒಪ್ಪಂದದ ಗುರಿಯಾಗಿದೆ ಎಂದರು. ಒಪ್ಪಂದದಡಿಯಲ್ಲಿ ಭಾರತೀಯ ರಫ್ತಿಗೆ ಹಿಂದಿನ ೫೦ ಪ್ರತಿಶತ ಪರಸ್ಪರ ಸುಂಕವನ್ನು ಈಗ ಶೇಕಡಾ ೧೮ ಕ್ಕೆ ಇಳಿಸಲಾಗಿದೆ. ಚೀನಾ, ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ವಿಯೆಟ್ನಾಂ ಸೇರಿದಂತೆ ನೆರೆಯ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತ ಈಗ ಕಡಿಮೆ ಸುಂಕ ದರಗಳನ್ನು ಹೊಂದಿದೆ ಎಂದು ಅವರು ಹೇಳಿದರು.

**ಧ್ವನಿ: ಪಿಯುಷ್ ಗೋಯಲ್, ಕೇಂದ್ರ ಸಚಿವ**

**<>><><*><><<>**

ಐದು ದಿನಗಳ ಭಾರತ ಭೇಟಿಯಲ್ಲಿರುವ ಸೀಶೆಲ್ಸ್ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನಿ, ತಮ್ಮ ಪತ್ನಿ ವೆರೋನಿಕ್ ಹರ್ಮಿನಿ ಅವರೊಂದಿಗೆ ನಿನ್ನೆ ಮುಂಬೈಗೆ ಆಗಮಿಸಿದ್ದಾರೆ. ಸೀಶೆಲ್ಸ್ ಅಧ್ಯಕ್ಷರು ಕೇಂದ್ರ ಬಂದರು, ಹಡಗು ಮತ್ತು ಜಲಮಾರ್ಗಗಳ ಖಾತೆ ಸಚಿವ ಸರ್ಬಾನಂದ ಸೋನೋವಾಲ್ ಅವರನ್ನು ಭೇಟಿಯಾದರು. ನಂತರ ಅವರು, ಭಾರತೀಯ ಕೈಗಾರಿಕಾ ಒಕ್ಕೂಟ-ಸಿಐಐ ಆಯೋಜಿಸಿದ್ದ ಭಾರತ-ಸೀಶೆಲ್ಸ್ ವ್ಯವಹಾರ ದುಂಡುಮೇಜಿನ ಸಭೆಯಲ್ಲಿ ಭಾಗವಹಿಸಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಅಧ್ಯಕ್ಷ ಹರ್ಮಿನಿ, ಕಳೆದ ೫೦ ವರ್ಷಗಳಲ್ಲಿ ಭಾರತ-ಸೀಶೆಲ್ಸ್ ಸಂಬಂಧಗಳು ಬಲಗೊಂಡಿದ್ದು, ತಮ್ಮ ದೇಶವು, ಭಾರತದೆಡೆಗಿನ ಸಹಕಾರವನ್ನು ವಿಸ್ತರಿಸಲು ಉತ್ಸುಕವಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಸೋನೋವಾಲ್, ಉಭಯ ದೇಶಗಳು ವಿಶ್ವಾಸಾರ್ಹ ಪಾಲುದಾರಿಕೆಯನ್ನು ಹಂಚಿಕೊಂಡಿದ್ದು, ಆರೋಗ್ಯ, ರಕ್ಷಣೆ, ಶಿಕ್ಷಣ, ಕಡಲ ಭದ್ರತೆ ಮತ್ತು ವಿಪತ್ತು ಪ್ರತಿಕ್ರಿಯೆಯಲ್ಲಿ ಸಹಕಾರವನ್ನು ಒಳಗೊಂಡಿದೆ ಎಂದು ಹೇಳಿದ್ದಾರೆ. ಬೆಳೆಯುತ್ತಿರುವ ವ್ಯಾಪಾರ, ಭಾರತೀಯ ಹೂಡಿಕೆಗಳು, ಮುಂಬೈ-ಮಾಹೆ ನೇರ ಸಂಪರ್ಕ ಮತ್ತು ಭಾರತದ ಬಂದರು ನೇತೃತ್ವದ ಅಭಿವೃದ್ಧಿ ಉಪಕ್ರಮಗಳು ಆರ್ಥಿಕ ಮತ್ತು

ಕಾರ್ಯತಂತ್ರದ ಸಹಕಾರಕ್ಕೆ ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿವೆ ಎಂದು ಸಚಿವ ಸೋನೋವಾಲ್ ತಿಳಿಸಿದ್ದಾರೆ.

**<>><><*><><<>**

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಿನ್ನೆ ರಾತ್ರಿ ನಡೆದ ಪುರುಷರ ಟಿ-೨೦ ಕ್ರಿಕೆಟ್ ವಿಶ್ವಕಪ್ ಪಂದ್ಯದಲ್ಲಿ, ಭಾರತವು ಅಮೆರಿಕ ತಂಡವನ್ನು ೨೯ ರನ್‌ಗಳಿಂದ ಸೋಲಿಸಿತು. ಟಾಸ್ ಸೋತು ಬ್ಯಾಟಿಂಗ್ ಮಾಡಿದ ಭಾರತ, ನಿಗದಿತ ೧೬೨ ರನ್‌ಗಳ ಗುರಿಯನ್ನು ನೀಡಿತು. ಗುರಿ ಬೆನ್ನಟ್ಟಿದ ಅಮೆರಿಕವು ನಿಗದಿತ ೨೦ ಓವರ್‌ಗಳಲ್ಲಿ ೮ ವಿಕೆಟ್‌ಗಳಿಗೆ ೧೩೨ ರನ್ ಗಳಿಸಲಷ್ಟೇ ಶಕ್ತವಾಯಿತು. ಅಮೆರಿಕ ಪರ ಶುಭಂ ರಂಜನೆ ಮತ್ತು ಸಂಜಯ್ ಕೃಷ್ಣಮೂರ್ತಿ ತಲಾ ೩೭ ರನ್‌ಗಳ ಕೊಡುಗೆ ನೀಡಿದರು. ಭಾರತ ಪರ ಮೊಹಮ್ಮದ್ ಸಿರಾಜ್ ೩ ವಿಕೆಟ್‌ಗಳನ್ನು ಪಡೆದರೆ, ಅರ್ಶ್‌ದೀಪ್ ಸಿಂಗ್ ೨ ವಿಕೆಟ್‌ಗಳನ್ನು ಪಡೆದರು. ೪೯ ಎಸೆತಗಳಲ್ಲಿ ಅಜೇಯ ೮೪ ರನ್‌ಗಳಿಸಿದ ಭಾರತದ ನಾಯಕ ಸೂರ್ಯಕುಮಾರ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಕೊಲಂಬೋದಲ್ಲಿ ನಿನ್ನೆ ನಡೆದ ಪಂದ್ಯಾವಳಿಯ ಮೊದಲ ಪಂದ್ಯದಲ್ಲಿ, ಪಾಕಿಸ್ತಾನ ತಂಡವು ನೆದರ್‌ಲ್ಯಾಂಡ್ ವಿರುದ್ಧ ೩ ವಿಕೆಟ್‌ಗಳಿಂದ ಜಯ ಗಳಿಸಿದೆ. ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಸ್ಕಾಟ್ಲೆಂಡ್ ಅನ್ನು ೩೫ ರನ್‌ಗಳಿಂದ ಸೋಲಿಸಿತು. ಪಂದ್ಯಾವಳಿಯಲ್ಲಿಂದು, ಮೂರು ಪಂದ್ಯಗಳು ನಡೆಯಲಿವೆ. ಚೆನ್ನೈನಲ್ಲಿ ನ್ಯೂಜಿಲೆಂಡ್ ಅಫ್ಘಾನಿಸ್ತಾನವನ್ನು ಎದುರಿಸಲಿದ್ದರೆ, ಮುಂಬೈನಲ್ಲಿ ಇಂಗ್ಲೆಂಡ್ ನೇಪಾಳ ಸೆಣೆಸಲಿವೆ. ಶ್ರೀಲಂಕಾ ಮತ್ತು ಐರ್ಲೆಂಡ್ ತಂಡಗಳು ಕೊಲಂಬೊದಲ್ಲಿ ಮುಖಾಮುಖಿಯಾಗಲಿವೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>**